





ಆದರೆ ಇಂದು ಅಲ್ಲಿ ಒಂದೂ ಅಂಗಡಿ ಇಲ್ಲ. ಏನು ಮಾಡೋದು? ಹೊಸ ತಲೆಮಾರಿನವರಿಗೆ ಇಲ್ಲಿ ಬದುಕಲು ಆಗುತ್ತಿಲ್ಲ. ಊರು ಹಾಳು ಸುರಿಯುತ್ತಿದ್ದರೂ ಅದನ್ನು ಬಿಟ್ಟು ಹೋಗಲು ನನಗೆ ಮನಸ್ಸಾಗಲಿಲ್ಲ. ಊರಿಗೆ ಜೀವಂತಿಕೆ ತರಲೆಂದೇ ನನ್ನ ಗೆಳತಿಯರ ಸಹಕಾರದೊಂದಿಗೆ 350ಕ್ಕೂ ಹೆಚ್ಚು ಗೊಂಬೆಗಳನ್ನು ಮಾಡಿ ನಿಲ್ಲಿಸಿದೆ' ಎನ್ನುವುದು ಅವರ ವಿವರಣೆ.

ರಸ್ತೆಯ ಬದಿಯ ಕೈತೋಟದಲ್ಲಿ ಕೆಲಸ ಮಾಡುತ್ತಿರುವ ಮಹಿಳೆ, ಆರಾಮ ಕುರ್ಚಿಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಮನುಷ್ಯ, ಸಿಗರೇಟ್ ಸೇದುವ ಗಾರೆ ಕೆಲಸದವರು, ಬಸ್ಸಿಗಾಗಿ ಕಾಯುತ್ತಾ ಹರಟೆ ಹೊಡೆಯುತ್ತಿರುವವರು, ಮಕ್ಕಳನ್ನು ಕೂಡಿಸಿಕೊಂಡು ಬಂಡಿಯಾಟಯಾಡುತ್ತಿರುವ ತಂದೆ, ಮರದಿಂದ ಹಣ್ಣು ಕದಿಯುತ್ತಿರುವ ತುಂಟ ಹೀಗೆ ಗ್ರಾಮದ ಸಹಜ ಜೀವನವನ್ನು ಈ ಗೊಂಬೆಗಳು ಕಟ್ಟಿಕೊಡುತ್ತಿವೆ.

ತಾನು ರೂಪಿಸುವ ಎಲ್ಲ ಗೊಂಬೆಗಳಿಗೂ ಒಂದು ರೀತಿಯ ಹಾಸ್ಯದ ಸ್ಪರ್ಶ ಸಿಗುವಂತೆ ಎಚ್ಚರವಹಿಸಿರುತ್ತಾರೆ ಅಯಾನೊ. ಅವನ್ನು ನಿಲ್ಲಿಸುವ, ಕೂರಿಸುವ ಸ್ಥಳದ ಒಟ್ಟಾರೆ ವಾತಾವರಣಕ್ಕೆ ಸಹಜವಾಗಿ ಹೊಂದಿಕೊಳ್ಳುವಂತೆ ವಸ್ತ್ರವಿನ್ಯಾಸ ಮತ್ತು ಮುಖಭಾವ ರೂಪಿಸುತ್ತಾರೆ. ಗೊಂಬೆಗಳನ್ನು ನೋಡಿದ ಹಲವರು ಅವು ಜೀವಂತ ಮನುಷ್ಯರೇ ಆಗಿರಬಹುದು ಎಂದುಕೊಂಡು ಮಾತನಾಡಲು ಯತ್ನಿಸಿದ್ದೂ ಇದೆಯಂತೆ.

ಖುಷಿಯ ವಿಷಯವೆಂದರೆ ಗೊಂಬೆಗಳ ಕಾರಣಕ್ಕೇ ನಾಗೊರೊ ಗ್ರಾಮಕ್ಕೆ ಪ್ರವಾಸಿಗರು ಬರುತ್ತಿದ್ದಾರೆ. 'ಬ್ಲಾಗ್ ಒಂದರಲ್ಲಿದ್ದ ಪ್ರವಾಸ ಕಥನ ಓದಿ ಈ ಹಳ್ಳಿ ಹುಡುಕಿ ಬಂದೆ. ಗೊಂಬೆಗಳನ್ನು ನೋಡಿ ಖುಷಿಯಾಯ್ತು' ಎನ್ನುವುದು ನಾಗೊರೊಗೆ ಬಂದಿದ್ದ ಫ್ರಾನ್ಸ್‌ನ ಫಾನ್ನಿ ರನೌಡ್ ಅವರ ಮಾತು.

ಊರಿನ ಸಂದರ್ಶಕರ ಪುಸ್ತಕದಲ್ಲಿ ಓರ್ವ ಪ್ರವಾಸಿ, 'ಗೊಂಬೆಗಳು ಚೆನ್ನಾಗಿವೆ. ಆದರೆ ಈ ಊರಿನಲ್ಲಿದ್ದ ಜೀವಂತ ಮನುಷ್ಯರು ಏನಾದರು? ಎಲ್ಲಿಗೆ ಹೋದರು?' ಎಂಬ ಸಾಲುಗಳನ್ನು ಬರೆದಿದ್ದಾರಂತೆ. ಹೌದಲ್ಲಾ ಅವರೆಲ್ಲಾ ಏನಾದರು? ಎಲ್ಲಿಗೆ ಹೋದರು?

## ಕುಸಿಯುತ್ತಿದೆ ಜಪಾನ್ ಜನಸಂಖ್ಯೆ

ಕಳೆದ ವರ್ಷ ಜಪಾನ್‌ನಲ್ಲಿ ಜನಿಸಿದ ಒಟ್ಟು ಮಕ್ಕಳ ಸಂಖ್ಯೆ ಕೇವಲ 8.64 ಲಕ್ಷ. ಜಪಾನ್‌ನಲ್ಲಿ ಮೊದಲ ಬಾರಿಗೆ ಜನಸಂಖ್ಯೆ ದಾಖಲಿಸಿದ್ದು 1899ರಲ್ಲಿ. ಅಂದಿನಿಂದ ಇಂದಿನವರೆಗೆ ಅಂದರೆ ಕಳೆದ 120 ವರ್ಷಗಳಲ್ಲಿ ಎಂದಿಗೂ ಜಪಾನ್‌ನಲ್ಲಿ ವರ್ಷವೊಂದಕ್ಕೆ 9 ಲಕ್ಷಕ್ಕಿಂತ ಕಡಿಮೆ ಮಕ್ಕಳು ಜನಿಸಿರಲಿಲ್ಲ. 2019ರಲ್ಲಿ ಜಪಾನ್‌ನಲ್ಲಿ ಮೃತಪಟ್ಟವರ ಒಟ್ಟು ಸಂಖ್ಯೆ 13.7 ಲಕ್ಷ. ಅಂದರೆ ಹುಟ್ಟಿದ ಮಕ್ಕಳಿಗಿಂತಲೂ ಸತ್ತವರ ಸಂಖ್ಯೆ ಸುಮಾರು 4 ಲಕ್ಷ ಹೆಚ್ಚು.

ಹುಟ್ಟಿನ ಪ್ರಮಾಣಕ್ಕಿಂತ ಸಾವಿನ ಪ್ರಮಾಣ